# ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)

ಸಂ. ನಸಶಿ/ಕಾ.ವಿ./ಟೆಂಡರು/ನಗರಸಭೆ ನಿಧಿ/ವಿವ– /2009–10 ದಿನಾಂಕ: 06–01–2010.

## ದರವಾರು ಪ್ರಕಟಣೆ

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾನೂನು ಹಾಗೂ ನಿಯಮಾವಳಿ–2000 ರಂತೆ ಲೋಕೋಪಯೋಗಿ ಇಲಾಖೆ ಹಾಗೂ ಶಿರಸಿ ನಗರಸಭೆಯಲ್ಲಿ ಪ್ರಸ್ತುತ ಸಾಲಿಗೆ ನೋಂದಾಯಿಸಿದ ಅರ್ಹ ಗುತ್ತಿಗೆದಾರರು/ವರ್ಕ ಶಾಪ್‌ದಾರರು/ಫ್ಯಾಬ್ರಿಕೇಟರ್ಸ್ ರಿಂದ ನಗರಸಭಾ ನಿಧಿ ಅಡಿ ಬಿಡಕಿಬೈಲ್ ಸರ್ವೇ ಸಂ. ಸಿ.ಟಿ.ಎಸ್. 2206ರ ಸುತ್ತಲೂ ಮಾದರಿಯಾದ ತಾತ್ಕಾಲಿಕ ಅಂಗಡಿಗಳನ್ನು ನಿರ್ಮಿಸಲು ದರವಾರನ್ನು ಕರೆಯಲಾಗಿದೆ. ಭರ್ತಿ ಮಾಡಿದ ಟೆಂಡರುಗಳನ್ನು ಲಕೋಟೆಗಳಲ್ಲಿ ಇಟ್ಟು ಮೊಹರ್ ಬಂದ್ ಮಾಡಿ ಕಾಮಗಾರಿ ಹೆಸರು, ಗುತ್ತಿಗೆದಾರರ ಹೆಸರು, ವಿಳಾಸ ನಮೂದಿಸಿ ಈ ಕಚೇರಿಯಲ್ಲಿ ದಿನಾಂಕ: 08–02–2010ರ ಸಂಜೆ: 4:30 ಗಂಟೆಯವರೆಗೆ ಸಲ್ಲಿಸುವುದು. ಸ್ವೀಕೃತ ಟೆಂಡರುಗಳನ್ನು ದಿನಾಂಕ: 08–02–2010 ರಂದು ಸಂಜೆ: 5:00 ಗಂಟೆಗೆ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು. ರಜೆ ಇದ್ದಲ್ಲಿ ಮುಂದಿನ ಕಚೇರಿ ವೇಳೆಯಲ್ಲಿ ತೆರೆಯಲಾಗುವುದು. ಇಲ್ಲವಾದಲ್ಲಿ ಮುಂದಿನ ದಿನಾಂಕಗಳನ್ನು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಾಗೂ ಷರತ್ತುಗಳಿಗಾಗಿ ಕಚೇರಿಯ ಕೆಲಸದ ವೇಳೆಯಲ್ಲಿ ಖುದ್ದಾಗಿ ಬಂದು ಕೇಳಿ ತಿಳಿದುಕೊಳ್ಳತಕ್ಕದ್ದು.

1. ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 06–02–2010 (11:00 ಗಂಟೆವರೆಗೆ)
2. ಭರ್ತಿ ಮಾಡಲ್ಪಟ್ಟ ಹಾಗೂ ಮೊಹರಾದ ಟೆಂಡರು ನಮೂನೆಗಳನ್ನು ಸ್ವೀಕರಿಸುವ ದಿನಾಂಕ : 08–02–2010 (4:30 ಗಂಟೆಗೆ)
3. ಸ್ವೀಕೃತ ಟೆಂಡರುಗಳನ್ನು ತೆರೆಯುವ ಸ್ಥಳ ಹಾಗೂ ದಿನಾಂಕ : 08–02–2010 (5:00 ಗಂಟೆಗೆ) **ನಗರಸಭೆ ಕಚೇರಿ**

| ಕ್ರ.ಸಂ. | ಕಾಮಗಾರಿಯ ಹೆಸರು | ದರವಾರದ ವಿಧ | ಮುಂಗಡ ಠೇವಣಿ ಮೊತ್ತ | ಖಾಲಿ ಟೆಂಡರ್ ನಮೂನೆ ಶುಲ್ಕ | ಕಾಮಗಾರಿ ಯನ್ನು ಪೂರ್ಣಗೆ ೞಳಿಸುವ ಅವಧಿ |
|---|---|---|---|---|---|
| 1 | ನಗರದ ಮಧ್ಯ ಭಾಗದಲ್ಲಿರುವ ಬಿಡ್ಕಿಬೈಲ್ ಪ್ರದೇಶದ ಸುತ್ತಲೂ ತಾತ್ಕಾಲಿಕ ಮಾದರಿ ಅಂಗಡಿಗಳನ್ನು ನಿರ್ಮಿಸುವುದು. | ಐಟಂವಾರು ದರ ನಮೂದು | 25,000 | 1,500 | 20 ದಿನಗಳು |

### ವಿಧಿಸಲಾಗಿರುವ ಪೂರ್ವ ಶರತ್ತುಗಳು:–

1. ದರವಾರಿನಲ್ಲಿ ಭಾಗವಹಿಸುವ ಫ್ಯಾಬ್ರಿಕೇಟರ್/ವರ್ಕಶಾಪ್‌ದಾರರು/ಗುತ್ತಿಗೆದಾರರು ದಿನಾಂಕ: 30–01–2010ರ ಒಳಗಡೆ ರೂ. 500–00 ಶುಲ್ಕವನ್ನು ಭರಣ ಮಾಡಿ ನಗರಸಭೆಯಲ್ಲಿ ನೋಂದಣಿ ಮಾಡತಕ್ಕದ್ದು.
2. ಗುತ್ತಿಗೆದಾರರು ಯಾವುದೇ ಶರತ್ತುಗಳನ್ನೊಳಗೊಂಡು ಸಲ್ಲಿಸಲಾಗುವ ಟೆಂಡರುಗಳನ್ನು ತಿರಸ್ಕರಿಸಲಾಗುವುದು.
3. ಗುತ್ತಿಗೆದಾರರು/ವರ್ಕಶಾಪ್‌ದಾರರು/ಫ್ಯಾಬ್ರಿಕೇಟರ್ಸ್‌ದಾರರು ಖಾಲಿ ಟೆಂಡರು ನಮೂನೆಗಳಿಗೆ ಅರ್ಜಿ ಸಲ್ಲಿಸುವಾಗ ನೋಂದಣಿ ಪ್ರಮಾಣ ಪತ್ರದ ದೃಢೀಕೃತ ಪ್ರತಿ ಸದರಿಯವರಿಂದ ಕಾರ್ಯನಿರ್ವಹಣಾ ಅನುಭವ ಪತ್ರ ಪರಿಶೀಲನೆ ಒದಗಿಸುವುದು.

4. ಟೆಂಡರ ಫಾರ್ಮ ಬೆಲೆಯನ್ನು ಯಾವುದೇ ಬ್ಯಾಂಕಿನಲ್ಲಿ ಪಡೆದ ಡಿ.ಡಿ.ಯೊಂದಿಗೆ ಪೌರಾಯುಕ್ತರು, ನಗರಸಭೆ, ಶಿರಸಿ ರವರ ಹೆಸರಿಗೆ ಖುಲ್ಲಾ ಟೆಂಡರ ಫಾರ್ಮಗೆ ಅರ್ಜಿ ಸಲ್ಲಿಸುವುದು. ಖುಲ್ಲಾ ಟೆಂಡರ್ ಫಾರ್ಮಗಳಿಗಾಗಿ ತುಂಬಿದ ಹಣವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಮತ್ತು ಬೇರೆ ಕೆಲಸಗಳಿಗೆ ವರ್ಗಾಯಿಸಲಾಗುವುದಿಲ್ಲ. (ನಗದು ಹಣ ಮತ್ತು ಚೆಕ್ಕುಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ).
5. ಗುತ್ತಿಗೆದಾರರು ನಿಗದಿತ ಮುಂಗಡ ಠೇವಣಿ ಮೊತ್ತವನ್ನು ಪೌರಾಯುಕ್ತರು, ನಗರಸಭೆ, ಶಿರಸಿ ರವರ ಪದನಾಮಕ್ಕೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದ ಡಿ.ಡಿ. ಯನ್ನು ಸಲ್ಲಿಸುವುದು.
6. ಗುತ್ತಿಗೆದಾರರಿಗೆ ವಹಿಸಿಕೊಡಲಾಗಿರುವ ಕಾಮಗಾರಿಯನ್ನಾಗಲೀ ಕಾಮಗಾರಿಯ ಯಾವುದೇ ಭಾಗದ ನಿರ್ವಹಣೆಯನ್ನಾಗಲೀ ಯಾವುದೇ ವ್ಯಕ್ತಿಗೆ ಜಿ.ಪಿ.ಎ. ಮೂಲಕವಾಗಲೀ ಅಥವಾ ಇನ್ನಿತರ ರೀತಿಯಲ್ಲಿ ಉಪ ಗುತ್ತಿಗೆ ಆಧಾರದ ಮೇಲೆ ವಹಿಸಿಕೊಡುವುದನ್ನು ನಿಷೇಧಿಸಲಾಗಿದೆ.
7. ಸಕ್ಷಮ ಪ್ರಾಧಿಕಾರವು ಈ ಟೆಂಡರ್ ಪ್ರಕಟಣೆಯನ್ನಾಗಲೀ ಪ್ರಕಟಣೆಯಲ್ಲಿನ ಯಾವುದೇ ಅಥವಾ ಎಲ್ಲಾ ಕಾಮಗಾರಿಗಳನ್ನು ಯಾವುದೇ ಕಾರಣಗಳನ್ನು ನೀಡದೇ ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿದೆ.
8. ಕಾಮಗಾರಿಯನ್ನು ವಹಿಸಿಕೊಂಡ ಗುತ್ತಿಗೆದಾರರು ನಿಗದಿಗೊಳಿಸಿದ ಕಾಲ ಮಿತಿಯೊಳಗಾಗಿ ಪೂರ್ತಿಗೊಳಿಸತಕ್ಕದ್ದು. ಕುಂಠಿತ ಪ್ರಗತಿಗೆ ಟೆಂಡರು ನಿಯಮಾವಳಿಗಳ ಪ್ರಕಾರ ದಂಡ ವಿಧಿಸಲಾಗುವುದು. ಕಾಲಮಿತಿ ನಿರ್ವಹಣೆಯ ಜವಾಬ್ದಾರಿ ಹೊತ್ತ ಪತ್ರ ಟೆಂಡರಿನ ಜೊತೆಗೆ ಲಗತ್ತಿಸುವುದು.
9. ಕಾಮಗಾರಿಯ ಮೂರು ಹಂತದ ಛಾಯಾ ಚಿತ್ರಗಳನ್ನು (ಕಾಮಗಾರಿ ಪೂರ್ವದಲ್ಲಿ, ಕಾಮಗಾರಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಪೂರ್ಣಗೊಂಡ ನಂತರ) ತಮ್ಮ ಸ್ವಂತ ಖರ್ಚಿನಲ್ಲಿ ತಗೆದು ಸಲ್ಲಿಸತಕ್ಕದ್ದು.
10. ಯಶಸ್ವಿ ಗುತ್ತಿಗೆದಾರರು ಟೆಂಡರು ದರ ಅನುಮೋದನೆಯಾದ 7 ದಿನದೊಳಗಾಗಿ ಶೇ. 5%ರ ಭದ್ರತಾ ಠೇವನ್ನು ಹಾಗೂ ಡಿ.ಡಿ. ಅಥವಾ ಎನ್.ಎಸ್.ಸಿ., ಅಡಮಾನ ಮಾಡಿದ ಮೊಬಲಗು ಬ್ಯಾಂಕ್ ಠೇವು ಪೌರಾಯುಕ್ತರು, ನಗರಸಭೆ, ಶಿರಸಿರವರ ಹೆಸರಿಗೆ ನೀಡತಕ್ಕದ್ದು.
11. ಗುತ್ತಿಗೆದಾರರು ಕಾಮಗಾರಿಯ ಕಾರ್ಯಾದೇಶ ಪಡೆದ ದಿನಾಂಕದಂದು ಸ್ಥಳವನ್ನು ಹಸ್ತಾಂತರಿಸಲಾಗಿದೆಯೆಂದು ತಿಳಿಯತಕ್ಕದ್ದು.
12. ಕಾಮಗಾರಿಯ ಸಂಪೂರ್ಣ ಮಾಹಿತಿಯುಳ್ಳ ಸೂಚನಾ ಫಲಕವನ್ನು ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿಯೇ ಕಾಮಗಾರಿ ಸ್ಥಳದಲ್ಲಿ ಅಳವಡಿಸತಕ್ಕದ್ದು.
13. ಯಶಸ್ವಿ ಗುತ್ತಿಗೆದಾರರು ಶೇ. 5ರ ಠೇವಣಿ ಕಟ್ಟಿದ 24 ತಾಸಿನಲ್ಲಿ ಬಾಂಡ್ ಕರಾರು ಮಾಡಿ ಕೆಲಸದ ಆದೇಶ ಪಡೆಯುವ ಪ್ರಕ್ರಿಯೆಗೆ ಅಣಿಯಾಗಿರತಕ್ಕದ್ದು. ನಂತರ ಟೆಂಡರು ವೇಳೆಗೆ ಇಟ್ಟ ಇ.ಎಮ್.ಡಿ. ಹಣವ್ನನು ಪರತ್ ನೀಡಲಾಗುವುದು.
14. ಕಾಮಗಾರಿಯಲ್ಲಿ ಯಾವುದೇ ಕಾರಣಕ್ಕೂ ಬಾಲಕಾರ್ಮಿಕರನ್ನು ಉಪಯೋಗಿಸುವುದನ್ನು ನಿಷೇಧಿಸಲಾಗಿದೆ. ಮತ್ತು ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ತರಹದ ಕೆಲಸಗಾರರ ಸುರಕ್ಷತೆ ನಿಮ್ಮದೇ ಪೂರ್ಣ ಜವಾಬ್ದಾರಿಯಾಗಿದ್ದು, ಸದರಿ ಕಾಮಗಾರಿ ವೇಳೆಯಲ್ಲಿ ಯಾವುದೇ ಪ್ರಾಣ ಅಥವಾ ಹಾನಿ ಸಂಭವಿಸಿದ್ದಲ್ಲಿ ಸಂಪೂರ್ಣ ಜವಾಬ್ದಾರಿ ನಿಮ್ಮದ್ದಾಗಿರುತ್ತದೆ.
15. ಕಾಮಗಾರಿಗೆ ಬೇಕಾಗುವ ಕಚ್ಚಾ ವಸ್ತು ಮತ್ತು ಸಾಮಗ್ರಿಗಳನ್ನು ಶೇಖರಣೆ ಮಾಡುವಾಗ ಸಾರ್ವಜನಿಕರ ಓಡಾಟಕ್ಕೆ ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಶೇಖರಿಸುವುದು. ಈ ರೀತಿಯಾಗಿ ಶೇಖರಿಸುವ ಸಾಮಗ್ರಿಗಳ ನಿರ್ವಹಣೆಯಿಂದ ರಸ್ತೆಗೆ ಅಥವಾ ಇನ್ನಿತರ ಜಾಗೆಗಳಿಗೆ ಹಾನಿಯಾದ್ದಲ್ಲಿ ಅದನ್ನು ನೀವೇ ಭರಿಸತಕ್ಕದ್ದು.
16. **ತಾತ್ಕಾಲಿಕ ಅಂಗಡಿಗಳ ಸಂಖ್ಯೆಯು ವಿವಿಧ ಅಳತೆಯಲ್ಲಿದ್ದು ಸಂಖ್ಯೆಯನ್ನು ಹೆಚ್ಚಿಗೆ ಅಥವಾ ಕಡಿಮೆ ಮಾಡುವ ಅಧಿಕಾರ ನಗರಸಭೆ ಕಾಯ್ದಿರಿಸಿಕೊಂಡಿದೆ.**
17. ಗುತ್ತಿಗೆದಾರರಿಗೆ ನಿರ್ವಹಿಸಿದ ಕಾಮಗಾರಿಯ ಅಳತೆಯ ಆಧಾರದಲ್ಲಿ ಬಿಲ್ಲನ್ನು ಪಾವತಿಸಲಾಗುವುದು.
18. ಸದರಿ ದರವಾರಿನಲ್ಲಿರುವ ಐಟಂಗಳನ್ನು ಆಯ್ಕೆ ಮಾಡುವ ಅಧಿಕಾರ ನಗರಸಭೆಯದ್ದಾಗಿರುತ್ತದೆ.
19. ಈ ಮೇಲಿನ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದ್ದು ಗಮನಕ್ಕೆ ಬಂದಲ್ಲಿ ಕರಾರು ಉಲ್ಲಂಘನೆ ಮಾಡಿದಕ್ಕೆ ಕ್ರಮಜರುಗಿಸಲಾಗುವುದು.

20. ಈ ಪ್ರಕಟಣೆಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ತಾಂತ್ರಿಕ ವಿಭಾಗ, ನಗರಸಭೆ, ಶಿರಸಿ ಇವರಲ್ಲಿ ಪಡೆದುಕೊಳ್ಳಬಹುದಾಗಿದೆ ಹಾಗೂ ನಗರಸಭೆಯ ವೆಬ್‌ಸೈಟ್ ರಲ್ಲಿ ಪಡೆಯಬಹುದಾಗಿದೆ.
21. ಸಂಪರ್ಕ ದೂರವಾಣಿ ಸಂಖ್ಯೆ 08384–226338, ಈ–ಮೇಲ್: comm_srs@yahoo.com sr_programmer_sirsi@yahoo.in

| | |
|---|---|
| ಅಧ್ಯಕ್ಷರು,<br>ನಗರಸಭೆ, ಶಿರಸಿ. | ಪೌರಾಯುಕ್ತರು,<br>ನಗರಸಭೆ, ಶಿರಸಿ. |